ಕವಿತೆ



ಲಲಿತಾ ಸಿದ್ಧಬಸವಯ್ಯ

ಕಲೆ: ಎಸ್.ವಿ. ಹೂಗಾರ್



# ಬೆರಳು ಸಂದಿನ ಭಂಡಾಸುರರು

ಶಿವದೇವರು
ಸರಸರ ಬೆಟ್ಟ ಇಳಿಯುತ್ತಿದ್ದರು
ಗಂಟೆಸರ ಘಣಗುಡುತಿತ್ತು
ಹೊತ್ತಿಗುಂಟ ಎದ್ದವರು
ಹಲ್ಲುಜ್ಜಿದ್ದೆಷ್ಟೊ ಅಷ್ಟೆ
ರುವರುವ ಕೊರೆಗಾಳಿ
ಅದುರದ ಬೆತ್ತಲೆ ಬೆನ್ನು
ಅದುರುವ ಮೀನಖಂಡ
ಎತ್ತಿಕಟ್ಟಿದ ಮಂಡೆ
ಕಣ್ಣು ಕೆಂಡದುಂಡೆ
ಕವೆಗೋಲು ಎಡಗೈಗೆ
ಬುಡುಬುಡುಕೆ ಬಲಗೈಗೆ

ಎದುರು ಮುಖ
ವಾಗಿ ಹತ್ತಿ ಬರುತ್ತಿದ್ದ
ಗಂಗಮ್ಮ ಕಂಡರೂ ಕಂಡೇ ಇಲ್ಲದಂಗೆ
ಉದಾಸೀನದ ಸೀನು ಸೀತದ್ದು
ಕಸಿವಿಸಿಗೊಳಿಸಿದರೂ ಬೆಸಸದೆ
ತಗುಲಿಕೊಂಡರೆ ಇವಳು ಇನ್ನಷ್ಟು ಚಳಿ
ಯೆನ್ನುತ್ತ ಹತ್ತು ಮೆಟ್ಟಿಲು ಇಳಿದರೋ
ಅಗೋ ಗೌರಮ್ಮ!

ದುರದುರ ಉರಿನೋಟ
ಕರಕರ ಹಲ್ಲುಕಡಿತ
ಶಿವದೇವರನ್ನು ಅನಾಮತ್ತು ನೂಕಿ
ಮುಂದಕ್ಕೆ ಹೆಣ್ಣುಲಿಯ ಬಿಟಗೊಂಡು
ಪಕ್ಕಕ್ಕೆ ಏಳುಮಂದೆಮ್ಮರನ್ನ ಇಟಗೊಂಡು
ಅವಳು ಹತ್ತುವಾಗ್ಗೆ
ಇಳಿಯುತ್ತಿರುವ ಇವರ ಗುಂಡಿಗೆ
ಡೊಳ್ಳು ಬಡೆದರೂ